# ಗಾಂಧಿನಗರ ಪೋಸ್ಟ್

## ಸವಾಲುಗಳಿಲ್ಲದ ದಾರಿಯಲ್ಲಿ...



ನೃತ್ಯ ನಿರ್ದೇಶಕ ಇಮ್ರಾನ್ ಸರ್ದಾರಿಯಾ ಅವರ ಚೊಚ್ಚಿಲ ನಿರ್ದೇಶನದ ಚಿತ್ರದಿಂದ ನಟಿ ರಮ್ಯಾ ಅವರು ಹೊರಬೀಳುವುದು ಹೆಚ್ಚೂ ಕಡಿಮೆ ಖಚಿತವಾಗಿದೆ. ಸಂಸದರಾದ ನಂತರ ಸಿನಿಮಾಗಳಲ್ಲಿ ಆಸಕ್ತಿ ಮತ್ತು ಬಿಡುವು ಕಳೆದುಕೊಂಡಂತಿರುವ ಅವರು, ಹೊಸ ಸಿನಿಮಾಗಳನ್ನು ಒಪ್ಪಿಕೊಳ್ಳದಿರಲು ನಿರ್ಧರಿಸಿದ್ದಾರೆ ಎನ್ನುವುದು ಅವರ ನಿಕಟವರ್ತಿಗಳ ಮಾತು. ಈ ನಡುವೆ, ಈಗಾಗಲೇ ಅವರ ನಟನೆಯಲ್ಲಿ ಸಾಕಷ್ಟು ಭಾಗ ಚಿತ್ರೀಕರಣ ನಡೆಸಿರುವ 'ನೀರ್‌ದೋಸೆ' ಮತ್ತು 'ಆರ್ಯನ್' ಚಿತ್ರಗಳು ನಾಯಕಿಯ ಪುನರಾಗಮನದ ನಿರೀಕ್ಷೆಯಲ್ಲಿವೆ.

ತಮ್ಮ ಕನಸಿನ ನಾಯಕಿಗಾಗಿ ಇನ್ನಷ್ಟು ಹೆಚ್ಚು ಕಾಯಲು ಸಿದ್ಧರಿಲ್ಲದ ಇಮ್ರಾನ್ ಅವರು ಬೇರೆ ನಾಯಕಿಯನ್ನು ಹುಡುಕಲೇಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ. ಸದ್ಯಕ್ಕೆ ಅವರ ಮುಂದಿರುವ ಹೆಸರು ರಾಧಿಕಾ ಪಂಡಿತ್.

ಹೊಸ ನಿರ್ದೇಶಕರು ಹಾಗೂ ನಟರ ಬಗ್ಗೆ ರಾಧಿಕಾ ಅವರಿಗೆ ಇನ್ನಿಲ್ಲದ ಆಸ್ಥೆ. ಈ ಕಾಳಜಿ ಕೂಡ ಇಮ್ರಾನ್ ಅವರ ಆಯ್ಕೆಗೆ ಕಾರಣವಾಗಿದೆ. ಪ್ರಸ್ತುತ ತೆರೆಕಂಡಿರುವ 'ದಿಲ್‌ವಾಲ' ಚಿತ್ರದಲ್ಲಿ ರಾಧಿಕಾ ನಟನೆಯ ಬಗ್ಗೆ ಸಹೃದಯರ ಮೆಚ್ಚುಗೆ ವ್ಯಕ್ತವಾಗಿದೆ. ಈ ಚಿತ್ರದ ನಿರ್ಮಾಪಕ ಶೈಲೇಂದ್ರಬಾಬು ಅವರ ಪ್ರಕಾರ, 'ರಾಧಿಕಾ ಪ್ರಸ್ತುತ ಕನ್ನಡ ಚಿತ್ರರಂಗದ ನಂಬರ್ 1 ನಟಿ'. ತಮ್ಮ ಈ ಆಯ್ಕೆಯ ಹಿನ್ನೆಲೆಯಲ್ಲಿ, ಪ್ರತಿಭೆ ಹಾಗೂ ಯಶಸ್ಸಿನ ಜೊತೆಗೆ ಕಲಾವಿದೆಯಾಗಿ ರಾಧಿಕಾ ಅವರ ಬದ್ಧತೆಯನ್ನು ಕೂಡ ಬಾಬು ಪ್ರಶಂಸಿಸುತ್ತಾರೆ.

ರಮ್ಯಾ ಅವರ ಉಪಸ್ಥಿತಿಯಲ್ಲಿ 'ನಂ. 1 ನಟಿ' ಎನ್ನುವ ಸ್ಥಾನ ಚರ್ಚಾಸ್ಪದವಾಗಿತ್ತು. ಆದರೆ, ರಾಜಕಾರಣದತ್ತ ಅವರು ಮುಖ ಮಾಡಿದ ಮೇಲೆ ಈ ಚರ್ಚೆ ತಿಳಿಯಾಗಿದೆ. ರಾಗಿಣಿ 'ತುಪ್ಪದ ಹಾಡು'ಗಳಲ್ಲೇ ತೃಪ್ತಿಪಟ್ಟುಕೊಳ್ಳುತ್ತಿದ್ದಾರೆ. ಐಂದ್ರಿತಾ ಮಂಕಾಗಿದ್ದಾರೆ. ದೀಪಾ ಸನ್ನಿಧಿ, ರಚಿತಾ ರಾಮ್, ಸಿಂಧು ಲೋಕನಾಥ್, ಪ್ರಣೀತಾ ಮುಂತಾದ ಚೆಲುವೆಯರು ನೆಲೆ ಕಂಡುಕೊಳ್ಳಲು ಹೆಣಗಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ, ಸದ್ಯಕ್ಕಂತೂ ಸವಾಲುಗಳಿಲ್ಲದ ದಾರಿಯಲ್ಲಿ ರಾಧಿಕಾ ಸಾಗುತ್ತಿದ್ದಾರೆ.

■ ರಘು


Celebrate Durga Puja by Prasiddhi



Silks, Cottons & Salwars

Prasiddhi SILKS

A renowned name for well known saris

K.H.Road Ph: 22236613 | M.G.Road Ph: 25580433 | Bannerghatta Road Ph: 26689345 | Commercial Street Ph: 25321545 | Domlur Ph: 4151 1156